32	Jamkhandi-Maharastra Border via Teradal – Kudachi – Managasuli	79
33	HoranAdu – Subramanya via Kalasa – Kottigehara-Mudigere-Sakaleshpura Junction-Vanagur	164
34	Molkalmur to SH 19 (KSHIP 1 Road)	6
35	Bidra – Chincholi via Ekhelli (NH9)	61
36	Padubidri – Karkala	28
37	Kollegal-Tamilnadu Border via Hanur-MM Hills	97
38	Virajpet – Somawarpet via Madikere	71
Total Length (Kms)		**3.411**

ಕರ್ನಾಟಕ ವಿಧಾನ ಸಭೆ

222 ಶ್ರೀ ನರಸಿಂಹ ನಾಯಕ (ರಾಜುಗೌಡ) (ಸುರಪುರ)

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮಾನ್ಯ ವಾರ್ತಾ ಸಚಿವರು

01) ರಾಜ್ಯದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಕಾರ್ಯನಿರತ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಮಟ್ಟದ ಪತ್ರಕರ್ತರು ವೃತ್ತಿ ಸಂಬಂಧಿ ಚಟುವಟಿಕೆಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲೆಯೊಳಗೆ ಪ್ರಯಾಣಕ್ಕೆ ಸೀಮಿತಗೊಳಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೂಲಕ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗುವುದು ಎಂದು ಘೋಷಿಸಲಾಗಿದೆ.

2) ಕ್ರಮ ಕೈಗೊಂಡಿದ್ದರೆ, ಯಾವ ಹಂತದಲ್ಲಿದೆ;

ಉಚಿತ ಬಸ್‌ಪಾಸ್ ಹಂಚಿಕೆ ಸಂಬಂಧ ತಗಲುವ ವೆಚ್ಚ ಮತ್ತು ಅನುರಾಸಬೆಕಾದ ವಿಧಾನಗಳ ಬಗ್ಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಮಾಹಿತಿ ಪಡೆಲಾಗಿದ್ದು ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ.

ಕರ್ನಾಟಕ ವಿಧಾನ ಸಭೆ

223 ಶ್ರೀ ನರಸಿಂಹನಾಯಕ (ರಾಜುಗೌಡ) (ಸುರುಪುರ)

ಬಿ.ಎಸ್.ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಸುರಪುರ ತಾಲ್ಲೂಕಿನ ಬೊನ್ನಾಳದಲ್ಲಿ ಪಕ್ಷಿಧಾಮ ನಿರ್ಮಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಬೊನ್ನಾಳ ಪಕ್ಷಿಧಾಮ ನಿರ್ಮಾಣಕ್ಕಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿದ್ದು ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಮೊದಲನೇ ಹಂತವಾಗಿ ಕೇಂದ್ರ ಸರ್ಕಾರದಿಂದ ರೂ. 36.55 ಲಕ್ಷ ಅನುದಾನ ಬಿಡುಗಡೆಯಾಗಿರುತ್ತದೆ.

ಆ) ಕ್ರಮ ಕೈಗೊಂಡಿದ್ದಲ್ಲಿ ಯಾವ ಹಂತದಲ್ಲಿದೆ;

ಸದರಿ ಕೆರೆಯು ಪ್ರಸ್ತುತ ನೀರಾವರಿ ಇಲಾಖೆಯ (ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ) ಸುಪರ್ದಿಯಲ್ಲಿದ್ದು, ಕೆರೆಯನ್ನು ಪಕ್ಷಿಧಾಮವಾಗಿ ಘೋಷಿಸಲು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವನ್ನು ಕೋರಲಾಗಿದೆ.

ಇ) ಕಾಮಗಾರಿ ಎಂದಿನಿಂದ ಪ್ರಾರಂಭಿಸಲಾಗುವುದು?

ಉಪ ಅರಣ್ಯ ಸಂರಕ್ಷಣಾಧಿಕಾರಿ, ಗುಲ್ಬರ್ಗ ಇವರು ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಕೈಗೊಂಡು ಈಗಾಗಲೇ ರೂ. 28.275 ಲಕ್ಷಗಳಷ್ಟು ಕಾಮಗಾರಿಗಳನ್ನು ನಿರ್ವಹಿಸಿರುತ್ತಾರೆ.

ಕರ್ನಾಟಕ ವಿಧಾನಸಭೆ

224 ಡಾ॥ ಬಗಲಿ ಸಾರ್ವಭೌಮ ಸಶಗೌಡ(ಇಂಡಿ)

ಆನಂದ ವಸಂತ ಅಸ್ನೋಟಿಕರ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ಇಂಡಿ ಮತ ಕ್ಷೇತ್ರದಲ್ಲಿ ಕಳೆದ ವರ್ಷ ಎಷ್ಟು ಕೆರೆಗಳಲ್ಲಿ ಎಷ್ಟೆಷ್ಟು ಮೀನಿನ ಮರಿಗಳನ್ನು ಬಿಡಲಾಯಿತು ಇದಕ್ಕೆ ತಗಲಿದ ವೆಚ್ಚ ಎಷ್ಟು;

ಇಂಡಿ ಮತಕ್ಷೇತ್ರದಲ್ಲಿ ಕಳೆದ ವರ್ಷ ಏಳು ಕೆರೆಗಳಲ್ಲಿ ಒಟ್ಟು 6.01 ಲಕ್ಷ ಮೀನುಮರಿ ಬಿತ್ತನೆ ಮಾಡಲಾಗಿದೆ. ಇದಕ್ಕೆ ತಗುಲಿದ ವೆಚ್ಚ ರೂ.2.60 ಲಕ್ಷ ವಿವರಗಳು ಈ ಕೆಳಕಂಡಂತಿದೆ:–

ಕ್ರ.ಸಂ.	ಕೆರೆಗಳ ಹೆಸರು	ಕೆರೆಯಲ್ಲಿ ಬಿಡಲಾದ ಮೀನುಮರಿಗಳ ಸಂಖ್ಯೆ (ಲಕ್ಷಗಳಲ್ಲಿ)
1	ಜೆಗಜಿವಣಿಕೆರೆ	1.55
2	ಅರ್ಜಿನಾಳಕೆರೆ	0.50
3	ಅಂಬಾಳಕೆರೆ	0.20
4	ರಾಜನಾಳಕೆರೆ	0.45
5	ಸಂಗೋಗಿಕೆರೆ	1.83
6	ಲೋಣಿಕೆರೆ	1.07
7	ಕೋಟನಾಳಕೆರೆ	0.41
	ಒಟ್ಟು	**6.01**

ಆ) ಈ ಬಿತ್ತನೆಯಿಂದ ಎಷ್ಟು ಉತ್ಪಾದನೆ ಆಗಿದೆ; ಉತ್ಪಾದನೆಯಾದ ಮೀನುಗಳ ತೂಕ ಎಷ್ಟು;